ಈ ಯೋಜನೆಗೆ ಈ ಕೆಳಕಂಡ ಮೂಲಗಳಿಂದ ಅಂದಾಜು ವೆಚ್ಚವನ್ನು ಭರಿಸಲಾಗುವುದು

1) ಕೇಂದ್ರ ಸರ್ಕಾರದಿಂದ–ರೂ 675.20 ಲಕ್ಷ ಅನುದಾನ (80%)

2) ಕರ್ನಾಟಕ ಸರ್ಕಾರದಿಂದ – ರೂ. 84.40ಲಕ್ಷ ಅನುದಾನ (10%)

3) ಸ್ಥಳೀಯ ಸಂಸ್ಥೆಯ ವಂತಿಗೆ (10%) ರೂ. 84.40 ಲಕ್ಷ

ಒಟ್ಟು ರೂ.844.00ಲಕ್ಷ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1162(1528)

ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಭಿವೃದ್ಧಿ ಪಡಿಸಲು ಮತ್ತು ಪುನರ್ ವ್ಯವಸ್ಥೆ ಗೊಳಿಸಲು ಯಾವ ಮಾರ್ಗ ಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗಿದೆ;

ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಬಿವೃದ್ಧಿಪಡಿಸಲು ಮತ್ತು ಪುನರ್ ವ್ಯವಸ್ಥೆಗೊಳಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದ್ದು, ಕಾಮಗಾರಿಗಳ ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗನುಸಾರವಾಗಿ ಕ್ರಮಕೈಗೊಳ್ಳಲಾಗಿದೆ.

ಆ) ಮಾರ್ಗಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿ ಮನಗೂಳಿ–ಬಿಜ್ಜಳ ರಾಜ್ಯ ಹೆದ್ದಾರಿ ಯಾವ ಕ್ರಮಾಂಕದಲ್ಲಿದೆ;

ಸದರಿ ಕಾಮಗಾರಿಯ ಅಭಿವೃದ್ಧಿ ಕಾರ್ಯವನ್ನು ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಇ) ಮಾರ್ಗ ಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿರುವ (ಕ್ರಮವಾಗಿ) ರಾಜ್ಯ ಹೆದ್ದಾರಿಗಳು ಯಾವುವು;

ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಮೇಲಿನಂತೆ ಅನುದನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಇವೆಲ್ಲವುಗಳನ್ನು ಯಾವ ನಿರ್ಧಿಷ್ಟ ಕಾಲಮಿತಿ ಹಾಕಿಕೊಂಡು ಅಭಿವೃದ್ಧಿಪಡಿಸಲಾಗುವುದು?

ಕಾಮಗಾರಿಯ ಆಕಾರ, ಅವಶ್ಯಕತೆ ಹಾಗೂ ಅದರಲ್ಲಿ ಒಳಗೊಂಡ ಅಂಶಗಳ ಹಾಗೂ ಅನುದಾನದ ಲಭ್ಯತೆಯ ಪ್ರಕಾರ ಕಾಲಮಿತಿಯನ್ನು ನಿಗಧಿಪಡಿಸಲಾಗುವುದು.